**7**

# ಕರ್ನಾಟಕ ಸರ್ಕಾರ

## (ಸಹಕಾರ ಇಲಾಖೆ)

## ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ

ನಂ. 1, ಅಲಿ ಅಸ್ಕರ್ ರಸ್ತೆ, ಬೆಂಗಳೂರು – 52.

## ಇವರ ನಡವಳಿಕೆಗಳು

**ವಿಷಯ:** ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ, 1997 ರಡಿಯ ಸಹಕಾರಿಗಳ ನಿರ್ದೇಶಕ ಮಂಡಳಿಯ ಚುನಾವಣೆಗೆ ಅಭ್ಯರ್ಥಿಗಳು ಚುನಾವಣಾ ಠೇವಣಿ ಇಡಬೇಕಾಗಿರುವ ಮೊತ್ತವನ್ನು ನಿಗದಿಪಡಿಸುವ ಕುರಿತು.

**ಉಲ್ಲೇಖ:** 1. ಕರ್ನಾಟಕ ಸರ್ಕಾರದ ಅಧಿಸೂಚನೆನಂ. ಸಿ.ಎಂ. ಡಬ್ಲ್ಯೂ : 57 ಸಿ.ಎಲ್.ಎಂ. 2003 ದಿನಾಂಕ 7.12.2004

2. ಕರ್ನಾಟಕ ರಾಜ್ಯ ಪತ್ರ ದಿನಾಂಕ 23.12.2004

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ಕ್ಕೆ ಕರ್ನಾಟಕ ಸರ್ಕಾರವು ಉಲ್ಲೇಖದ ಅಧಿಸೂಚನೆಯಂತೆ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ದಿನಾಂಕ 7.12.2004 ಇದನ್ನು ಕರ್ನಾಟಕ ರಾಜ್ಯ ಪತ್ರ ದಿನಾಂಕ 23.12.2004ರಲ್ಲಿ ಪ್ರಕಟಪಡಿಸಿದ್ದು ಅಂದಿನಿಂದ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಜಾರಿಗೆ ಬಂದಿರುತ್ತದೆ. ತತ್ಪರಿಣಾಮವಾಗಿ ಸದರಿ ನಿಯಮಗಳಂತೆ, ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳ ಮಂಡಳಿಗೆ ಚುನಾವಣೆ ನಡೆಸುವ ಕಾರ್ಯ ಸಹಕಾರಿಗಳ ನಿಬಂಧಕರಿಗೆ ನಿಯಮ 5 ರಂತೆ ದತ್ತವಾಗಿರುತ್ತದೆ. ಆದುದರಿಂದ, ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳ ನಿರ್ದೇಶಕ ಮಂಡಳಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದೆ.

ಸದರಿ ನಿಯಮ 5(9) ರಂತೆ ವಿವಿಧ ವರ್ಗಗಳ ಸಹಕಾರಿಗಳಿಗೆ ಅನ್ವಯಿಸುವಂತೆ ಚುನಾವಣಾ ಅಭ್ಯರ್ಥಿಗಳು ಚುನಾವಣಾ ಠೇವಣಿ ಇಡಬೇಕಾಗಿರುವ ಮೊತ್ತ ಮತ್ತು ಚುನಾವಣೆ ಮುಗಿದ ನಂತರ ಸದರಿ ಠೇವಣಿ ಮೊತ್ತ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಹಿಂದಿರುಗಿಸುವ ಬಗ್ಗೆ ಸಹಕಾರಿಗಳ ನಿಬಂಧಕರು ನಿರ್ಧರಿಸಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸಂಖ್ಯೆ: ಆರ್.ಎಸ್.ಆರ್:ಎಸ್.ವಿ.260:ಎಕ್ಸ್‌ಆರ್‌ಓ: 2004–05 ದಿನಾಂಕ : 25.2.2005

# ಆದೇಶ

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5 (9) ರಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಕೆ.ಹೆಚ್. ಗೋಪಾಲ ಕೃಷ್ಣೇಗೌಡ, ಭಾ.ಆ.ಸೇ. ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ಆದ ನಾನು ಕರ್ನಾಟಕ ರಾಜ್ಯದಲ್ಲಿರುವ ವಿವಿಧ ಸೌಹಾರ್ದ ಸಹಕಾರಿಗಳ ನಿರ್ದೇಶಕ ಮಂಡಳಿಯ ಚುನಾವಣೆಗೆ, ವಿವಿಧ ವರ್ಗಗಳ ಸಹಕಾರಿಗಳ ನಿರ್ದೇಶಕ ಮಂಡಳಿಯ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ ನಾಮಪತ್ರದೊಂದಿಗೆ ಚುನಾವಣಾ ಠೇವಣಿ ಇಡಬೇಕಾಗಿರುವ ಮೊತ್ತವನ್ನು ಕೆಳಕಂಡಂತೆ ನಿಗದಿಪಡಿಸಿರುತ್ತೇನೆ.

| ಕ್ರ. ಸಂ. | ಕಾರ್ಯವ್ಯಾಪ್ತಿಗೆ ಅನುಗುಣವಾಗಿರುವ ಸೌಹಾರ್ದ ಸಹಕಾರಿಗಳ ವಿವರ | ಚುನಾವಣಾ ಠೇವಣಿ ಇಡಬೇಕಾಗಿರುವ ಮೊತ್ತ |
|---|---|---|
| 1. | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿಯಿರುವ | ರೂ. 100.00 |
| 2. | ತಾಲ್ಲೂಕು ಮಟ್ಟಕ್ಕಿಂತ ಕಾರ್ಯ ವ್ಯಾಪ್ತಿ ವಿಸ್ತರಿಸುವ | ರೂ. 300.00 |
| 3. | ತಾಲ್ಲೂಕು ಮಟ್ಟಕ್ಕಿಂತ ಹೆಚ್ಚಿಗೆ ಮತ್ತು ಜಿಲ್ಲಾ ಮಟ್ಟಕ್ಕಿಂತ | ರೂ. 1,000.00 |
| 4. | ಜಿಲ್ಲಾ ಮಟ್ಟಕ್ಕೆ ಕಾರ್ಯವ್ಯಾಪ್ತಿ ವಿಸ್ತರಿಸುವ ಸೌಹಾರ್ದ | ರೂ. 1,500.00 |
| 5. | ಜಿಲ್ಲಾ ಮಟ್ಟಕ್ಕಿಂತ ಹೆಚ್ಚಿಗೆ ಮತ್ತು ರಾಜ್ಯ ಮಟ್ಟಕ್ಕೆ | ರೂ. 2,000.00 |

ಈ ಮೇಲಿನ ಮೊತ್ತವನ್ನು ಸಹಕಾರಿಯ ಹೆಸರಿಗೆ ನಗದು / ಬ್ಯಾಂಕರ್ ಚೆಕ್ / ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಿ ರಶೀದಿಯನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು. ಸದರಿ ಠೇವಣಿ ಮೊತ್ತದಲ್ಲಿ ಪರಿಶಿಷ್ಟ ಜಾತಿ / ಪಂಗಡದವರು ಅಥವಾ ಮಹಿಳಾ ಅಭ್ಯರ್ಥಿಯಾಗಿದ್ದಲ್ಲಿ ಮೇಲೆ ನಿಗದಿಪಡಿಸಿರುವ ಠೇವಣಿ ಮೊತ್ತದಲ್ಲಿ ಶೇ. 50ರಷ್ಟು ಮಾತ್ರ ಪಾವತಿಸತಕ್ಕದ್ದು. ಅಭ್ಯರ್ಥಿಗಳು ಚಲಾವಣೆಯಾದ ಒಟ್ಟು ಕ್ರಮಬದ್ಧ ಮತಪತ್ರಗಳಲ್ಲಿ ಕನಿಷ್ಠ 1/10ಕ್ಕಿಂತ ಕಡಿಮೆ ಮತ ಗಳಿಸಿದ್ದಲ್ಲಿ ಠೇವಣಿ ಮೊತ್ತವನ್ನು ಸಹಕಾರಿಯು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬಂದಿರುತ್ತದೆ. ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ 25.12.2005ರಂದು ಹೊರಡಿಸಿದೆ.

ಸಹಿ/–

**(ಕೆ. ಹೆಚ್. ಗೋಪಾಲಕೃಷ್ಣಗೌಡ)**
ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು